ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

ಮೋಹನ್ ಕುಮಾರ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ, ಯಲಹಂಕ ಪೊಲೀಸ್ ಠಾಣೆ, ಬೆಂಗಳೂರು

ರಿಟ್ ಅಜಿಸಂಖ್ಯೆ: 36563/2018 (ಜಿಎಮ್-ಆರ್ಇಎಸ್), ದಿನಾಂಕ 31 ನೇ ಅಕ್ಟೋಬರ್, 2018.

ಆಜ್ಞೆ

ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್:

ಯಲಹಂಕ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಥಮ ಮಾಹಿತಿ ವರದಿ (ಎಫ್.$$_0_$$ಆರ್)ಸಂಖ್ಯೆ: 58/2017 ರಲ್ಲಿನ ಆರೋಪಿ ಸಂಖ್ಯೆ 1, 2 ಮತ್ತು 12 ಇವರು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167 ( 2) ನೇ ಪ್ರಕರಣದ ಅಡಿಯಲ್ಲಿ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲು ಕೋರಿ ಸಲ್ಲಿಸಿದ ಅವರ ಅರ್ಜಿಯನ್ನು (ಐ. ಎ. ಸಂಖ್ಯೆ: 3) ತಳ್ಳಿಹಾಕಿ ಮಾನ್ಯ ಸತ್ರ ನ್ಯಾಯಾಧೀಶರು ಹೊರಡಿಸಿದ ದಿನಾಂಕ: 12.05.2017 ರ ಆದೇಶವನ್ನು ಪ್ರಶ್ನಿಸಿ ಈ ಅರ್ಜಿಯನ್ನು ಸಲ್ಲಿಸಿದ್ದಾರೆ.

2. ಶ್ರೀ ಅನೀಸ್ ಅಲಿ ಖಾನ್, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಹಾಗೂ ಶ್ರೀ ಎಸ್. ರಾಚಯ್ಯ, ರಾಜ್ಯದ ಪರ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ಇವರುಗಳ ವಾದವನ್ನು ಆಲಿಸಲಾಯಿತು.

3. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳೆಂದರೆ-ದಿನಾಂಕ:20.02.2017 ರಂದು, ಭಾರತ ದಂಡ ಸಂಹಿತೆಯ 399 ನೇ ಮತ್ತು 402 ನೇ ಪ್ರಕರಣಗಳ ಅಡಿಯಲ್ಲಿ ಮತ್ತು ಆಯುಧಗಳ ಅಧಿನಿಯಮ, 1959 ರ 27 ನೇ ಮತ್ತು 30 ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳ ಸಂಬಂಧದಲ್ಲಿ ಒಂಬತ್ತು ವ್ಯಕ್ತಿಗಳ ವಿರುದ್ಧ ಯಲಹಂಕ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್.ಸಂಖ್ಯೆ: 58/2017 ನ್ನು ದಾಖಲಿಸಲಾಯಿತು; ಅರ್ಜಿದಾರರುಸಂಖ್ಯೆ: 1 ಮತ್ತು 2 ಇವರನ್ನು ದಸ್ತಗಿರಿ ಮಾಡಿದಿನಾಂಕ: 20.02.2017 ರಂದು ಹಾಗೂ ಅರ್ಜಿದಾರಸಂಖ್ಯೆ: 3 ಈತನನ್ನುದಿನಾಂಕ: 01.03.2017 ರಂದು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು; ಅಧಿಕಾರ ವ್ಯಾಪ್ತಿ ಹೊಂದಿದ ಮ್ಯಾಜಿಸ್ಟ್ರೇಟ್ ಅವರು, ತನಿಖೆಗಾಗಿ ಅವರನ್ನು ಪೊಲೀಸ್ ಅಭಿರಕ್ಷೆಗೆ ಕಳುಹಿಸಿದರು; ತನಿಖೆಯ ನಂತರ, ಪೊಲೀಸರುದಿನಾಂಕ: 10.05.2017 ರಂದು ಆರೋಪ ಪಟ್ಟಿಯನ್ನು ಸಲ್ಲಿಸಿದರು, ತರುವಾಯ,ದಿನಾಂಕ: 02.08.2017 ರಂದು, ಬೆಂಗಳೂರಿನ ಪೊಲೀಸ್ ಕಮೀಷನರ್ ಅವರು, ಕರ್ನಾಟಕ ಸಂಘಟಿತ ಅಪರಾಧಗಳ ನಿಯಂತ್ರಣ ಅಧಿನಿಯಮ, 2000 ದ (ಸಂಕ್ಷಿಪ್ತವಾಗಿ " ಕೆಸಿಓಸಿಎ) ಉಪಬಂಧಗಳನ್ನು ಅನ್ವಯಿಸಲು ಅನುಮತಿ ನೀಡಿದರು.

4. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167 ( 2) ನೇ ಪ್ರಕರಣದ ಅಡಿಯಲ್ಲಿ ಜಾಮೀನಿನ ಮೇಲೆ ತನ್ನನ್ನು ಬಿಡುಗಡೆ ಮಾಡಲು ಕೋರಿ, ಆರೋಪಿಯು ಐದು ಅರ್ಜಿಗಳನ್ನು ಸಲ್ಲಿಸಿದ್ದಾನೆ.ಅರ್ಜಿದಾರನ ಅರ್ಜಿಯನ್ನು ಐ.ಎ.ಸಂಖ್ಯೆ: 3 ಎಂದು ನೋಂದಾಯಿಸಲಾಗಿದೆ.ಮಾನ್ಯ ಸತ್ರ ನ್ಯಾಯಾಧೀಶರು ಸಾಮಾನ್ಯ ಪ್ರಶ್ನಿತ ಆದೇಶದ ಮೂಲಕ ಎಲ್ಲಾ ಅರ್ಜಿಗಳನ್ನು ವಿಲೆ ಮಾಡಿದ್ದಾರೆ.

5. ಬಂಧನಕ್ಕೆ ಕಳುಹಿಸಿದ ದಿನಾಂಕದಿಂದ 60 ದಿನಗಳ ಒಳಗಾಗಿ ಪೊಲೀಸ್ ಆರೋಪ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ; ಆದುದರಿಂದ ಅರ್ಜಿದಾರರು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167 ( 2) ನೇ ಪ್ರಕರಣದ

ಮೇರೆಗೆ ಜಾಮೀನು ಮಂಜೂರಾತಿ ಪಡೆಯುವುದಕ್ಕೆ ಹಕ್ಕುಳ್ಳವರಾಗಿರುವರು ಎಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಅನೀಸ್ ಅಲಿಯವರು ವಾದಿಸಿದ್ದಾರೆ.

6. ಮಹಾರಾಷ್ಟ್ರ ರಾಜ್ಯ – ವಿರುದ್ಧ-ಶ್ರೀಮತಿ ಭಾರತಿ ಚಾಂದ್ಮಲ್ ವರ್ಮಾ ಅಲಿಯಾಸ್ ಆಯೇಷಾ ಖಾನ್ ' ಮತ್ತು ಅಚ್ಪಾಲ್ ವಿರುದ್ಧ-ರಾಜಸ್ಥಾನ ರಾಜ್ಯ 2018 ಎಸ್ಸಿಸಿ ಆನ್ಲೈನ್ ಎಸ್ 1638 ಈ ಮೊಕದ್ದಮೆಗಳಲ್ಲಿನ ತೀರ್ಪುಗಳನ್ನು ಅವರು ಅವಲಂಬಿಸಿದ್ದಾರೆ.

7. ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಫೀಡರ್ ಅವರು, ಚ ನ್ಯಾಯಯುತವಾಗಿಯೇ 60 ದಿನಗಳು ಮುಕ್ತಾಯವಾದ ನಂತರ ಆರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂಬ ಸಂಗತಿಯನ್ನು ನಿವೇದಿಸಿಕೊಂಡಿದ್ದಾರೆ.

8. ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು ನಾನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ ಮತ್ತು ದಾಖಲೆಗಳನ್ನು ಅವಲೋಕಿಸಿದ್ದೇನೆ.

9. ನಿಸ್ಸಂದೇಹವಾಗಿ, ಆರೋಪ ಪಟ್ಟಿಯನ್ನು ಸಲ್ಲಿಸಿದ ದಿನಾಂಕವಾದ 10.05.2017 ರಂದು ಇದ್ದಂತೆ, ಅರ್ಜಿದಾರರುಸಂಖ್ಯೆ: 1 ಮತ್ತು 2 ಇವರನ್ನು 77 ದಿನಗಳವರೆಗೆ ಅಭಿರಕ್ಷೆಯಲ್ಲಿ ಉಳಿಸಲಾಗಿದೆ ಮತ್ತು ಅರ್ಜಿದಾರಸಂಖ್ಯೆ:

ಈತನನ್ನು 69 ದಿನಗಳವರೆಗೆ ಅಭಿರಕ್ಷೆಯಲ್ಲಿ ಉಳಿಸಲಾಗಿದೆ. ದಸ್ತಗಿರಿ ಮಾಡಿದ ದಿನಾಂಕದಿಂದ ಲೆಕ್ಕಹಾಕಿ 60 ದಿನಗಳು ಮುಕ್ತಾಯವಾದ ದಿನದಂದು, ಗುಣಾರ್ಹತೆಗಳ ಮೇಲೆ ಆರೋಪಿಯನ್ನು ಹೆಚ್ಚಿನ ಅವಧಿಯ ಅಭಿರಕ್ಷೆಯಲ್ಲಿ ಉಳಿಸಬೇಕಾದ ಅಗತ್ಯವಿತ್ತೇ ಎಂಬ ಸನ್ನಿವೇಶವನ್ನು ನಿರ್ಧರಿಸಲು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ನಿಬಂಧನೆಗಳಿಗನುಸಾರವಾಗಿ ಮಾನ್ಯ ಮ್ಯಾಜಿಸ್ಟ್ರೇಟರ ಮುಂದೆ ಯಾವುದೇ ದಾಖಲೆಗಳನ್ನಾಗಲಿ ಅಥವಾ ಆರೋಪ ಪಟ್ಟಿಯನ್ನಾಗಲಿ ಮಂಡಿಸಿರುವುದಿಲ್ಲ.

10. ಅಚ್ಪಾಲ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು, ಅದರಿಂದ ಉದ್ಧೃತಗೊಳಿಸಿದ ಪ್ಯಾರಾದಲ್ಲಿ, ಉದಯ್ ಮೋಹನ್ಲಾಲ್ ಆಚಾರ್ ವಿರುದ್ಧ ಮಹಾರಾಷ್ಟ್ರ ರಾಜ್ಯ ಮೊಕದ್ದಮೆಯಲ್ಲಿ ವಿಧಿಸಿದ ತತ್ವಗಳನ್ನು ಸುಸಂಗತವಾಗಿ ಅನುಸರಿಸಲಾಗಿದೆ ಎಂದು ದಾಖಲಿಸಿದೆ.ಸಂಬಂಧಪಟ್ಟ ಕಂಡಿಕೆಗಳನ್ನು ಈ ಮುಂದಿನಂತೆ ಓದಲಾಗಿದೆ:

"11. ತನಿಖೆ ಇತ್ಯರ್ಥದಲ್ಲಿದ್ದು, ಸಂಹಿತೆಯ 167 ( 2) ನೇ ಪ್ರಕರಣದ ಅಡಿಯಲ್ಲಿ ಗೊತ್ತುಪಡಿಸಲಾದ ಅವಧಿಯ ಒಳಗಾಗಿ ತನಿಖೆಯನ್ನು ಪೂರ್ಣಗೊಳಿಸದೆ ಇದ್ದಲ್ಲಿ, ಅಭಿರಕ್ಷೆಯಲ್ಲಿರುವ ಆರೋಪಿಯ ಹಕ್ಕುಗಳಿಗೆ ಸಂಬಂಧಿಸಿದ ಕಾನೂನಿನ ಅಂಶವನ್ನು ಕುರಿತಂತೆ ಉದಯ್ ಮೋಹನ್ಲಾಲ್ ಆಚಾರ ವಿರುದ್ಧ ಮಹಾರಾಷ್ಟ್ರ ರಾಜ್ಯ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ತೀರ್ಪಿನಲ್ಲಿ ನಿರ್ದಿಷ್ಟವಾಗಿ ಹೇಳಲಾಗಿದೆ.ಈ ಮೊಕದ್ದಮೆಯಲ್ಲಿ, ವಿಷ್ಣು ಠಾಕೂರ್ -ವಿರುದ್ಧ-ಮಹಾರಾಷ್ಟ್ರ ರಾಜ್ಯ, ಸಂಜಯ್ ದತ್ ವಿರುದ್ಧ ಸಿ.ಬಿ.ಐ. ಬಾಂಬೆ ಮುಖಾಂತರ ಮಹಾರಾಷ್ಟ್ರ ರಾಜ್ಯ (II) ಮತ್ತು ಬಿಪಿನ್ ಶಾಂತಿಲಾಲ್ ಪಾಂಚಾಲ್ -ವಿರುದ್ಧ-ಗುಜರಾತ್ ರಾಜ್ಯ ಮೊಕದ್ದಮೆಗಳಲ್ಲಿ ಈ ನ್ಯಾಯಾಲಯದ ತೀರ್ಪನ್ನು ಗಣನೆಗೆ ತೆಗೆದುಕೊಂಡು, ನ್ಯಾಯಮೂರ್ತಿ ಪಟ್ನಾಯಕ್ ಅವರು (ಅಂದಿನ ಮಾನ್ಯ ಮುಖ್ಯ ನ್ಯಾಯಾಧೀಶರಾಗಿ ತಮ್ಮ ತೀರ್ಪಿನ 13 ನೇ ಪ್ಯಾರಾದಲ್ಲಿ

ಬಹುಪಾಲು ದಾಖಲಿಸಿದ ನಿರ್ಣಯಗಳ ಸ ಂ ಬ ಂ ಧದಲ್ಲಿ ಮಾತನಾಡಿದ್ದಾರೆ. ಪ್ರಸ್ತುತ ಉದ್ದೇಶಗಳಿಗಾಗಿ, ನಾವು 3 ನೇ ಮತ್ತು 4 ನೇ ನಿರ್ಣಯಗಳ ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಬಹುದಾಗಿದ್ದು, ಅವು ಈ ಕೆಳಗಿನಂತಿವೆ:

" 1

3. ಸದರಿ 90 ದಿನಗಳ ಅಥವಾ 60 ದಿನಗಳ ಅವಧಿಯ ಮುಕ್ತಾಯದ ನಂತರ, ಸಂದರ್ಭಾನುಸಾರ, ಗೊತ್ತುಪಡಿಸಲಾದ ಅವಧಿಯೊಳಗೆ ತನಿಖೆಯನ್ನು ಪೂರ್ಣಗೊಳಿಸುವಲ್ಲಿ ತನಿಖಾ ಏಜನ್ಸಿಯ ಕಡೆಯಿಂದಾದ ಲೋಪದ ಕಾರಣದಿಂದಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಲು ಆರೋಪಿಯ ಪರವಾಗಿ ರದ್ದು ಮಾಡಲಾಗದ ಹಕ್ಕು ಸಂಚಿತವಾಗುತ್ತದೆ ಮತ್ತು ಆರೋಪಿಯು ಜಾಮೀನನ್ನು ಸಿದ್ಧಪಡಿಸಿ, ಅದನ್ನು ಸಲ್ಲಿಸಿದ್ದರೆ, ಮ್ಯಾಜಿಸ್ಟ್ರೇಟರು ನಿರ್ದೇಶಿಸಿದಂತೆ ಜಾಮೀನಿನ ಮೇಲೆ ಬಿಡುಗಡೆಯಾಗುವುದಕ್ಕೆ ಹಕ್ಕುಳ್ಳವನಾಗುತ್ತಾನೆ.

4. ಗೊತ್ತುಪಡಿಸಲಾದ ಅವಧಿಯೊಳಗೆ ತನಿಖೆಯನ್ನು ಪೂರ್ಣಗೊಳಿಸುವಲ್ಲಿ ತನಿಖಾ ಏಜನ್ಸಿಯ ಕಡೆಯಿಂದಾದ ಲೋಪದ ಕಾರಣದಿಂದಾಗಿ ಆರೋಪಿಯ ಪರವಾಗಿ ಸಂಚಿತವಾಗಿದೆ ಎಂದು ಹೇಳಲಾದ ರದ್ದು ಮಾಡಲಾಗದ ಆತನ ಹಕ್ಕಿನ ಜಾರಿಗಾಗಿ ಆರೋಪಿಯ ಜಾಮೀನಿನ ಅರ್ಜಿಯನ್ನು ಸಲ್ಲಿಸಿದಾಗ, ಮ್ಯಾಜಿಸ್ಟ್ರೇಟ್ರು/ನ್ಯಾಯಾಲಯವು, ನಿರ್ದಿಷ್ಟಪಡಿಸಲಾದ ಂ ತೆ ಆರೋಪಿಯು 90 ದಿನಗಳ ಅಥವಾ 60 ದಿನಗಳ ಅವಧಿಗಾಗಿ ಅಭಿರಕ್ಷೆಯಲ್ಲಿದ್ದನು ಮತ್ತು ತನಿಖಾ ಏಜನ್ಸಿಯು ಯಾವುದೇ ಆರೋಪ ಪಟ್ಟಿಯನ್ನು ಸಲ್ಲಿಸಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಂಡು, ಅದನ್ನು ಕೂಡಲೇ ವಿಲೆ ಮಾಡಬೇಕಾಗುತ್ತದೆ.ಮ್ಯಾಜಿಸ್ಟ್ರೇಟ್/ನ್ಯಾಯಾಲಯದ ಕಡೆಯಿಂದ ಅಂಥ ತ್ವರಿತ ಕ್ರಮವು, ಅಧಿನಿಯಮದ ಉದ್ದೇಶವನ್ನು ಮತ್ತು ನಿಗದಿಪಡಿಸಿದ ಅವಧಿಯೊಳಗೆ ತನಿಖೆಯನ್ನು ಪೂರ್ಣಗೊಳಿಸುವಲ್ಲಿ ತನಿಖಾ ಏಜನ್ಸಿಯ ಕಡೆಯಿಂದಾದ ಲೋಪದ ಕಾರಣದಿಂದ ಜಾಮೀನಿನ ಮೇಲೆ ಬಿಡುಗಡೆಯಾಗುವ ಆರೋಪಿಯ ಕಾನೂನಾತ್ಮಕ ಆಜ್ಞಾಪನೆಯನ್ನು ನಿಷ್ಕಲಗೊಳಿಸಲು ಪ್ರಾಸಿಕ್ಯೂಷನ್‌ಅನ್ನು ಶಕ್ತಗೊಳಿಸುವುದಿಲ್ಲ.

12. ಉದಮ್ ಮೋಹನ್ಲಾಲ್ ಆಚಾರ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ವಿಧಿಸಿದ ತತ್ವಗಳನ್ನು ಈ ನ್ಯಾಯಾಲಯವು, ಎಂದರೆ ಪಶ್ಚಿಮ ಬಂಗಾಳ ರಾಜ್ಯ -ವಿರುದ್ಧ ದೀನೇಶ್ ದಾಲ್ಮೀಯ; ಸಂಜಯ್ ಕುಮಾರ್ ಕೇದಿಯಾ -ವಿರುದ್ಧ ಗುಪ್ತಚರ ಅಧಿಕಾರಿ, ನ್ಯಾಕ್ರೋಟಿಕ್ಸ್ ಕಂಟ್ರೋಲ್ ಬ್ಯೂರೋ; ಭಾರತ ಒಕ್ಕೂಟ -ವಿರುದ್ಧ– ನಿರಾಲ್ ಯಾದವ್ ಮತ್ತು ರಣಬೀರ್ ಶೋಕೀನ್ -ವಿರುದ್ಧ-ರಾಜ್ಯ (ದೆಹಲಿಯ ಎನ್ಸಿಐ) ಮೊಕದ್ದಮೆಗಳಲ್ಲಿ ನಿರಂತರವಾಗಿ ಅನುಸರಿಸುತ್ತಿದೆ.ಆದುದರಿಂದ, ಉದಯ ಮೋಹನ್ಲಾಲ್ ಆಚಾರ (ಮೇಲೆ ಹೇಳದ) ಮೊಕದ್ದಮೆಯಲ್ಲಿ ದಾಖಲಿಸಿದಂತೆ ನಿಗದಿಪಡಿಸಲಾದ ಅವಧಿಯ ಮುಕ್ತಾಯದ ನಂತರ, 3 ನೇ ನಿರ್ಣಯದ ನಿಬಂಧನೆಗಳನುಸಾರ, ನಿಗದಿಪಡಿಸಿದ ಅವಧಿಯೊಳಗೆ ತನಿಖೆಯನ್ನು ಪೂರ್ಣಗೊಳಿಸುವಲ್ಲಿ ತನಿಖಾ ಏಜನ್ಸಿಯ ಲೋಪದ ಕಾರಣದಿಂದ ಜಾಮೀನಿನ ಮೇಲೆ ಬಿಡುಗಡೆಯಾಗುವುದಕ್ಕೆ ಅರೋಪಿಯ ಪರವಾಗಿ ರದ್ದುಗೊಳಿಸಲಾಗದ ಹಕ್ಕು ಸಂಚಿತವಾಗುತ್ತದೆ ಎಂದು ನಿರ್ಣಯಿಸಿರುವುದನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಮ್ಯಾಜಿಸ್ಟ್ರೇಟರು ನಿರ್ದೇಶಿಸಿದಂತೆ ಆರೋಪಿಯು ಜಾಮೀನಿಗೆ ಸಿದ್ಧನಾಗಿದ್ದರೆ ಮತ್ತು ಅದನ್ನು ಸಲ್ಲಿಸಿದರೆ, ಆತನು ಜಾಮೀನಿನ ಮೇಲೆ ಬಿಡುಗಡೆಯಾಗಲು ಹಕ್ಕುಳ್ಳವನಾಗಿರುತ್ತಾನೆ.(ಒತ್ತು ನೀಡಲಾಗಿದೆ)

11. ಮಾನ್ಯ ವಿಚಾರಣಾ ನ್ಯಾಯಾಧೀಶರು, ಕೆಸಿಓಸಿಎ ಉಪಬಂಧಗಳನ್ನು ಅನ್ವಯಿಸಿಕೊಂಡು, ಪೊಲೀಸರು ಆರೋಪ ಪಟ್ಟಿಯನ್ನು ಸಲ್ಲಿಸಲು 90 ದಿನಗಳ ಸಮಯವನ್ನು ತೆಗೆದುಕೊಳ್ಳಬಹುದಾಗಿದೆ ಎಂಬ ಪೂರ್ವೋಕ್ತದ ಆಧಾರದ ಮೇಲೆ ಐ.ಎ.ಸಂಖ್ಯೆ: 3 ನ್ನು ವಜಾಗೊಳಿಸಿದ್ದಾರೆ.ಆದುದರಿಂದ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167 ( 2) ನೇ ಪ್ರಕರಣದ ಉಪಬಂಧಗಳು ಈ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

12. ಬೆಂಗಳೂರಿನ ಪೊಲೀಸ್ ಆಯುಕ್ತರು,ದಿನಾಂಕ: 2.8.2017 ರಂದು ಕೆಸಿಓಸಿಎ ಉಪಬಂಧಗಳನ್ನು ಅನ್ವಯಿಸಲು ಅನುಮತಿ ನೀಡಿದ್ದರೆಂದು ದಾಖಲೆಗಳಿಂದ ತಿಳಿದುಬರುತ್ತದೆ.ಆದ್ದರಿಂದ, 60 ನೇ ದಿನದ ಮುಕ್ತಾಯದ ನಂತರ, ಮಾನ್ಯ ಮ್ಯಾಜಿಸ್ಟ್ರೇಟರು ತಮ್ಮ ಮುಂದೆ ಯಾವುದೇ ದಾಖಲೆಗಳನ್ನು ಅಥವಾ ಆರೋಪ ಪಟ್ಟಿಯನ್ನು ಹೊಂದಿರಲಿಲ್ಲ ಎಂಬುದು ಅವಿವಾದೀತವಾದ ಸಂಗತಿ.

13. ಅಚ್ಪಾಲ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ರಾಕೇಶ್ ಕುಮಾರ್ ಪಾಲ್ -ವಿರುದ್ಧ-ಅಸ್ಸಾಮ್ ರಾಜ್ಯ (2017) 15 ಎಸ್ಸಿಸಿ 67 ಮೊಕದ್ದಮೆಯನ್ನನುಸರಿಸಿ, ಭಾರತ ಸರ್ವೋಚ್ಚ ನ್ಯಾಯಾಲಯವು, ತರ್ಕಬದ್ಧ ಆಧಾರಗಳ ಮೇಲೆ ಆರೋಪಿಯ ದಸ್ತಗಿರಿ ಅಥವಾ ಮರು-ದಸ್ತಗಿರಿಗಾಗಿ ಯಾವುದೇ ನಿಷೇಧವಿರುವಂತಿಲ್ಲ ಮತ್ತು ಅಂಥ ಸಂದರ್ಭದಲ್ಲಿ, ಆರೋಪಿಯು ನಿಯತ ಜಾಮೀನಿಗೆ ಅರ್ಜಿ ಸಲ್ಲಿಸಲು ಹಕ್ಕುಳ್ಳವನಾಗಿರುವನು ಎಂದು ನಿರ್ಣಯಿಸಿದೆ.

14. ಅಚ್ಪಾಲ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಪ್ರಾಧಿಕಾರವನ್ನನುಸರಿಸಿ, ಅರ್ಜಿದಾರರು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167 ( 2) ನೇ ಪ್ರಕರಣದ ಮೇರೆಗೆ ಜಾಮೀನಿನ ಮಂಜೂರಾತಿಗೆ ಹಕ್ಕುಳ್ಳವರಾಗಿದ್ದಾರೆ.

15. ತತ್ಪರಿಣಾಮವಾಗಿ, ಈ ಅರ್ಜಿಯು ಪರಿಗಣನೆಗೆ ಯೋಗ್ಯವಾಗಿದ್ದು, ಆದುದರಿಂದ ಈ ಮುಂದಿನ ಆಜ್ಞೆಯನ್ನು ಹೊರಡಿಸಲಾಗಿದೆ:

( i) ಅರ್ಜಿಯನ್ನು ಅನುಮತಿಸಲಾಗಿದೆ;

(ii) ಬೆಂಗಳೂರಿನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ (ಸಿಸಿಹೆಚ್ -1) ಕಡತದಲ್ಲಿನ ಎಫ್.ಐ.ಆರ್.ಸಂಖ್ಯೆ: 58/2017 (ವಿಶೇಷ ಸಿಸಿಸಂಖ್ಯೆ: 414/2017) ರಲ್ಲಿ ಹೊರಡಿಸಿದದಿನಾಂಕ: 12.5.2017 ರ ಆದೇಶವನ್ನು ತಳ್ಳಿಹಾಕಲಾಗಿದೆ;

(iii) ಅರ್ಜಿದಾರರು ಸಲ್ಲಿಸಿದ ಅರ್ಜಿ, ಐ.ಎ.ಸಂಖ್ಯೆ: 3 ನ್ನು ಅನುಮತಿಸಲಾಗಿದೆ ಮತ್ತು ಅರ್ಜಿದಾರರನ್ನು ಮುಂದಿನ ಷರತ್ತುಗಳ ಮೇರೆಗೆ, ಇತರ ಯಾವುದೇ ಪ್ರಕರಣದಲ್ಲಿ ಅಗತ್ಯವಿರದಿದ್ದರೆ, ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು:

(ಎ) ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯಕ್ಕೆ ಸಮಾಧಾನವಾಗುವಂತೆ, ಪ್ರತಿಯೊಬ್ಬ ಅರ್ಜಿದಾರನು 1,00,000/- ರೂ.ಗಳ ಮೊತ್ತದಷ್ಟಕ್ಕೆ ಇಬ್ಬರು ಜಾಮೀನುದಾರರ ಸಹಿತ ಅಷ್ಟೇ ಮೊತ್ತಕ್ಕೆ ಸ್ವತಃ ಎ ಬಂಧಪತ್ರವನ್ನು ಬರೆದುಕೊಟ್ಟ ನಂತರ, ಯಲಹಂಕ ಪೊಲೀಸ್ ಠಾಣೆಯಲ್ಲಿ ನೋಂದಾಯಿಸಲಾದ ಎಫ್.ಐ.ಆರ್.ಸಂಖ್ಯೆ: 58/2017 ರಲ್ಲಿ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡತಕ್ಕದ್ದು;

(ಬಿ) ಅರ್ಜಿದಾರರು ಪ್ರಾಸಿಕ್ಯೂಷನ್ ಸಾಕ್ಷಿಗಳನ್ನು ತಿದ್ದುವುದಕ್ಕೆ ಸಾಕ್ಷಿದಾರರ ಮೇಲೆ ಪ್ರಭಾವ ಬೀರತಕ್ಕದ್ದಲ್ಲ;

(ಸಿ) ಅರ್ಜಿದಾರರು, ಮೊಕದ್ದಮೆಯ ಸಂಗತಿಗಳ ಪರಿಚಯವುಳ್ಳ ಪ್ರಾಸಿಕ್ಯೂಷನ್ನ ಸಾಕ್ಷಿದಾರರನ್ನು ಅಥವಾ ಯಾರೇ ವ್ಯಕ್ತಿಯನ್ನು, ನ್ಯಾಯಾಲಯಕ್ಕೆ ಅಥವಾ ಈ ನಿಖಾಧಿ ಕಾರಿಗೆ ಅ ಂ ಥ ಸ ಂ ಗತಿಗಳನ್ನ ಬಹಿರಂಗಪಡಿಸುವುದರಿಂದ, ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಪ್ರೇರೇಪಿಸತಕ್ಕದ್ದಲ್ಲ, ಬೆದರಿಸತಕ್ಕದ್ದಲ್ಲ ಅಥವಾ ಅವರಿಗೆ ಯಾವುದೇ ರೀತಿಯ ವಾಗ್ದಾನ ಮಾಡತಕ್ಕದ್ದಲ್ಲ;

(ಡಿ) ಅರ್ಜಿದಾರರು ಖುದ್ದಾಗಿ ಯಾವುದೇ ಅಪರಾಧಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳತಕ್ಕದ್ದಲ್ಲ;

(ಇ) ಅರ್ಜಿದಾರರು ಮೇಲಿನ ಷರತ್ತುಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದರೆ, ಪ್ರಾಸಿಕ್ಯೂಷನ್ ಜಾಮೀನಿನ ರದ್ದತಿಯನ್ನ ರ ಲು ಹಕ್ಕುಳ್ಳವರಾಗಿರತಕ್ಕದ್ದು.

ತರ್ಕಬದ್ಧ ಆಧಾರಗಳ ಮೇಲೆ ಅರ್ಜಿದಾರರ ದಸ್ತಗಿರಿ ಅಥವಾ ಮರು ದಸ್ತಗಿರಿಯನ್ನು ಈ ಆದೇಶವು ನಿಷೇಧಿಸುವುದಿಲ್ಲ ಅಥವಾ ಅನ್ಯಥಾ ತಡೆಯೊಡ್ಡುವುದಿಲ್ಲ ಮತ್ತು ಅಂಥ ಸಂದರ್ಭಗಳಲ್ಲಿ, ಅರ್ಜಿದಾರರು ನಿಯತ ಜಾಮೀನಿಗೆ ಅರ್ಜಿ ಸಲ್ಲಿಸಲು ಹಕ್ಕುಳ್ಳವರಾಗಿರತಕ್ಕದ್ದು ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ಯಾವುದೇ ವೆಚ್ಚಗಳಿಲ್ಲ.